**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 21.05.2021.**

**1] ಮುದ್ದೇಬಿಹಾಳ ಪೊಲೀಸ ಠಾಣೆ ಗುನ್ನಾ. ನಂ: 89/2021 ಕಲಂ: 323,324,302,504,506 ಸ/ಕ 34 ಐ.ಪಿ.ಸಿ**

ದಿನಾಂಕ: 19.05.2021 ರಂದು 23-30 ಗಂಟೆ ಸುಮಾರಿಗೆ 1) ಮಹಮ್ಮದಸಾಬ ತಂದೆ ಸಣ್ಣರಾಜೇಸಾಬ ಢವಳಗಿ, 2) ದವಲತ್ತಬಿ ಗಂಡ ಮಹಮ್ಮದಸಾಬ ಢವಳಗಿ, 3) ಮಶ್ಯಾಕ ತಂದೆ ಮಹಮ್ಮದಸಾಬ ಢವಳಗಿ ಸಾ॥ ಎಲ್ಲರೂ ತಾರನಾಳ, ತಾ: ಮುದ್ದೇಬಿಹಾಳ ಇದರಲ್ಲಿ ಆರೋಪಿತರು ಇವರು ಫಿರ್ಯಾದಿಯ ಅಣ್ಣ ರಾಜೇಸಾಬ ತಂದೆ ಕಾಶೀಮಸಾಬ ದೊಡ್ಡಮನಿ ಇವನ ಸಂಗಡ ಜಗಳ ತಗೆದುಕೊಂಡು ನಮಗೆ ಕೊಡುವ ರೊಕ್ಕ ಕೊಡು ಅಂದರೆ ನಿನ್ನ ಮಕ್ಕಳ ಮೇಲೆ ಹಾಯ್ದು ನಮಗೆ ಬೈಯ್ಯಾಕತ್ತಿಯಾ ಮಗನೆ ಇವತ್ತು ನಿನಗೆ ಜೀವಂತ ಬಿಡುವುದಿಲ್ಲ ಅಂತಾ ಬೈದಾಡುತ್ತಾ ಕೊಲೆ ಮಾಡುವ ಉದ್ದೇಶದಿಂದ ಮಹಮ್ಮದಸಾಬನು ಬಡಿಗೆಯಿಂದ ರಾಜೇಸಾಬನ ಕೈಯಿ, ಕಾಲುಗಳಿಗೆ. ದವಲತ್ತಬಿ ಇವಳು ಕಲ್ಲಿನಿಂದ ರಾಜೇಸಾಬನ ತಲೆಗೆ, ಬೆನ್ನಲ್ಲಿ, ಪಕ್ಕಡಿಗೆ. ಮಶ್ಯಾಕ ಇವನು ಕೈಯಿಂದ ಮುಷ್ಠಿ ಮಾಡಿ ಎದೆಗೆ, ಮುಖಕ್ಕೆ ಹೊಡೆದು ಸಾದಾ ಹಾಗೂ ಭಾರಿ ಗಾಯಪಟ್ಟು ಪಡಿಸಿದ್ದಲ್ಲದೆ. ರಾಜೇಸಾಬನ ಮಕ್ಕಳಾದ ದಾವಲಸಾಬ ಮತ್ತು ಮಹಮ್ಮದರಫೀಕ ಇವರು ಬಿಡಿಸಲು ಹೋದಾಗ ಅವರಿಗೂ ಮುಖಕ್ಕೆ, ಕೈಯಿಗೆ ಹೊಡೆದು ಗಾಯಪಡಿಸಿದ್ದು ಇರುತ್ತದೆ. ಫಿರ್ಯಾದಿದಾರನು ಗಾಯ ಹೊಂದಿದ ತನ್ನ ಅಣ್ಣ ರಾಜೇಸಾಬ ಇವನಿಗೆ 108 ಅಂಬ್ಯುಲೆನ್ಸ ವಾಹನದಲ್ಲಿ ಉಪಚಾರ ಕುರಿತು ಮುದ್ದೇಬಿಹಾಳ ಸರಕಾರಿ ದವಾಖಾನೆಗೆ ಕರೆದುಕೊಂಡು ಬಂದು ಉಪಚಾರ ಮಾಡಿಸಿಕೊಂಡು, ಹೆಚ್ಚಿನ ಉಪಚಾರ ಕುರಿತು 108 ಅಂಬ್ಯುಲೆನ್ಸ ವಾಹನದಲ್ಲಿ ಬಾಗಲಕೋಟೆಗೆ ಕರೆದುಕೊಂಡು ಹೊರಟಾಗ ದಾರಿಯಲ್ಲಿ ರಾಜೇಸಾಬ ತಂದೆ ಕಾಶೀಮಸಾಬ ದೊಡ್ಡಮನಿ ವಯಾ 48 ವರ್ಷ ಇವನು ತೀರಿಕೊಂಡಿರುತ್ತಾನೆ. ಆಗ ವೇಳೆ ಇಂದು ಮದ್ಯಾಹ್ನ 1:00 ಗಂಟೆ ಆಗಿತ್ತು. ಈ ಬಗ್ಗೆ ಮೂರು ಜನರ ಮೇಲೆ ತನ್ನದು ಫಿರ್ಯಾದಿ ಇರುತ್ತದೆ ಅಂತಾ ವಗೈರೆ ನಮೂದ ಇರುತ್ತದೆ., ಈ ಬಗ್ಗೆ ರಮಜಾನ ತಂದೆ ಕಾಶೀಮಸಾಬ ದೊಡ್ಡಮನಿ ವಯಾ 26 ವರ್ಷ ಜಾತಿ ಪಿಂಜಾರ ಉದ್ಯೋಗ ಟ್ರೆಲರ್ ಕೆಲಸ ಸಾ; ತಾರನಾಳ ತಾ: ಮುದ್ದೇಬಿಹಾಳ, ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 20.05.2021 ರಂದು ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಮಹಿಳಾ ಪೊಲೀಸ್ ಠಾಣೆ ಗುನ್ನಾ. ನಂ: 52/2021 ಕಲಂ: 363 ಐಪಿಸಿ**

**ದಿನಾಂಕ** : 16.05.2021 **ರಂದು 11**:00 ಗಂಟೆಗೆ ವಿಜಯಪುರದ ಕಾರ್ಗಿಲ್ ನಗರದಲ್ಲಿರುವ ಫಿರ್ಯಾದಿಯ ಮನೆಯಿಂದ ಪಿರ್ಯಾದಿಯ ಮಗಳಾದ ನೊಂದ ಬಾಲಕಿ, ವಯಾ: 16 ವರ್ಷ 3 ತಿಂಗಳು ಉದ್ಯೋಗ: ಕೂಲಿ ಕೆಲಸ ಇವಳು ವಿಜಯಪುರದ ಕಾರ್ಗಿಲ್ ನಗರದಿಂದ ಮನೆಗಳ ಕೂಲಿ ಕೆಲಸಕ್ಕೆ ಹೋಗುವದಾಗಿ ಹೇಳಿ ಹೋದವಳು ಮರಳಿ ಮನೆಗೆ ಬಂದಿರುವದಿಲ್ಲ. ಅವಳು ಅಪ್ರಾಪ್ತ ವಯಸ್ಕಳು ಅಂತಾ ತಿಳಿದು ಸದರಿಯವಳಿಗೆ ಯಾರೋ ಯಾವುದೋ ಉದ್ದೇಶಕ್ಕಾಗಿ ಅಪಹರಣ ಮಾಡಿಕೊಂಡು ಹೋಗಿರಬಹುದು ಅಂತಾ ಸಂಶಯ ಇರುತ್ತದೆ. ಅನಿತಾ ಇವಳದು ದುಂಡ ಮುಖ, ಸಾದಕಪ್ಪು ಮೈಬಣ್ಣ ಬಣ್ಣ, ಮೈಯಿಂದ ಸಾದಾರಣ ಮೈಕಟ್ಟು, ಅಂದಾಜ ಎತ್ತರ : 5 ಪೂಟ್ 1 ಇಂಚು ಇದ್ದು, ಕನ್ನಡ, ಭಾಷೆ ಮಾತನಾಡುತ್ತಾಳೆ. ಅವಳು ಮನೆಯಿಂದ ಹೋಗುವಾಗ ಹಳದಿ ಬಣ್ಣದ ಚೂಡಿದಾರ ಧರಿಸಿಕೊಂಡು ಹೋಗಿರುತ್ತಾಳೆ. ಈ ಪ್ರಕಾರ ಚಹರೆ ಪಟ್ಟಿ ಇರುವ ಅನಿತಾ ಇವಳನ್ನು ಇಲ್ಲಿಯ ವರೆಗೆ ಅಲ್ಲಿ ಇಲ್ಲಿ ಹುಡುಕಾಡಿ ಬಂದು ಪಿರ್ಯಾದಿ ಕೊಡಲು ತಡವಾಗಿರುತ್ತದೆ ಕಾರಣ ಅನಿತಾ ಇವಳನ್ನು ತಪಾಸಣೆ ಮಾಡಿ ಅವಳಿಗೆ ಅಪಹರಣ ಮಾಡಿದ ಆರೋಪಿತರ ಮೇಲೆ ಪಿರ್ಯಾದಿ ಇರುತ್ತದೆ ಅಂತಾ ವಗೈರೆ ಪಿರ್ಯಾದಿಯಲ್ಲಿ ನಮೂದ ಇರುತ್ತದೆ.'. ಈ ಬಗ್ಗೆ ಯಲ್ಲಪ್ಪ ತಂದೆ ನಾಮದೇವ ಬಂಡಿವಡ್ಡರ ವಯಾ 57 ವರ್ಷ ಉದ್ಯೋಗ ಕೂಲಿ ಕೆಲಸ, ಸಾ॥ ಕಾರ್ಗಿಲ್ ನಗರ, ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ, ದಿನಾಂಕ: 20.05.2021 ರಂದು ಗಾಂಧಿಚೌಕ ಪೊಲೀಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆ ಗುನ್ನಾ. ನಂ: 130/2021 ಕಲಂ: 188,269 ಐಪಿಸಿ & ಕಲಂ 87 ಕೆ.ಪಿ ಆ್ಯಕ್ಟ್**

ದಿನಾಂಕ: 20.05.2021 ರಂದು 16:15 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ ಜಟ್ಟೆಪ್ಪ ತಂ ಬೀಮಪ್ಪ ರೂಗಿ ವಯಾ 25 ವರ್ಷ ಸಾ॥ ಮಧಬಾವಿ ಹಾಗೂ ಇನ್ನು 9 ಜನ ಈಗ ಲಾಕಡೌನ್ ಆದೇಶ ಇದ್ದರು ಸಹ ಸಾಮಾಜಿಕ ಅಂತರ ಕಾಯ್ದುಕೊಳ್ಳದೆ ಮಾನ್ಯ ಜಿಲ್ಲಾಧಿಕಾರಿಗಳು ಮಾಡಿದ ಆದೇಶವನ್ನು ದಿಕ್ಕರಿಸಿ ಗುಂಪಾಗಿ ಕುಳಿತು ಹೀಗೆ ಗುಂಪಾಗಿ ಕುಳಿತರೆ ಸಾಂಕ್ರಾಮಿಕ ರೋಗ ಹರಡುತ್ತದೆ ಅಂತಾ ತಿಳಿದು ತಿಳಿದು ತಮ್ಮ ತಮ್ಮ ಪಾಯ್ದೇಗೋಸ್ಕರ ಇಸ್ಪೇಟ ಎಲೆಗಳ ಸಹಾಯದಿಂದ ಅಂದರ ಬಾಹರ ಅನ್ನುವ ಮನ್ನಾ ಜೂಜಾಟ ಆಡುವ ಕಾಲಕ್ಕೆ ಸಿಕ್ಕ ಅಪರಾಧ ಜಪ್ತಾದ ಮಾಲು 1] ರೋಖ ಹಣ 9850/- ರೂ ಗಳು 2] 52 ಇಸ್ಪೇಟ ಎಲೆಗಳು ಕಿ: 00-00 ಈ ಪ್ರಕಾರ ಮಾಲನ್ನು ಜಪ್ತ ಮಾಡಿದ್ದು ಇರುತ್ತದೆ. ಈ ಬಗ್ಗೆ ಆನಂದ ವ್ಹಿ ಠಕ್ಕಣ್ಣವರ ಪಿ ಎಸ್ ಐ ವಿಜಯಪೂರ ಗ್ರಾಮೀಣ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ, ದಿನಾಂಕ: 20.05.2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಗೋಲಗುಮ್ಮಜ ಪೊಲೀಸ್ ಠಾಣೆ ಗುನ್ನಾ. ನಂ: 49/2021 ಕಲಂ: 188, 269 ಐಪಿಸಿ**

ದಿನಾಂಕ: 20.05.2021 ರಂದು 19:40 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ ಜಾವೀದ ತಂ: ಅಲ್ಲಾಭಕ್ಷ ಉಸ್ತಾದ, ವಯಾ-26 ವರ್ಷ, ಉದ್ಯೋಗ-ಕೂಲಿಕೆಲಸ, ಸಾ: ಗಚ್ಚಿನಮಹಲ, ಜೆ.ಎಂ.ರಸ್ತೆ ವಿಜಯಪುರ ಸಧ್ಯಕ್ಕೆ ಮಾನ್ಯ ಕರ್ನಾಟಕ ಸರಕಾರವು ಕರೋನಾ ವೈರಸ್/ಕೋವಿಡ್-19 ಅಪಾಯಕಾರಿ ಸಾಂಕ್ರಾಮಿಕ ರೋಗ ಹರಡದಂತೆ ಸೂಕ್ತ ಮುಂಜಾಗ್ರತಾ ಕ್ರಮವಾಗಿ ದಿನಾಂಕ: 10-05-2021 ರಂದು ಬೆಳಿಗ್ಗೆ 06:00 ಗಂಟೆಯಿಂದ ದಿನಾಂಕ: 24.05.2021 ಬೆಳಿಗ್ಗೆ 06:00 ಗಂಟೆಯವರೆಗೆ ಸಾರ್ವಜನಿಕ, ರಾಜಕೀಯ, ಕ್ರೀಡಾ ಮತ್ತು ಮನರಂಜನೆ ಹಾಗೂ ಮುಂತಾದ ಚಟುವಟಿಕೆಗಳನ್ನು ನಿಷೇಧಿಸಿದಲ್ಲದೆ ತುರ್ತು ಅಗತ್ಯ ವಸ್ತುಗಳನ್ನು ಪಡೆದುಕೊಳ್ಳಲು

ನಿಗಧಿತ ಸಮಯವನ್ನು ಹೊರತುಪಡಿಸಿ ಇನ್ನೂಳಿದಂತೆ ಸಮಯ ಮೀರಿ ಅನಾವಶ್ಯಕವಾಗಿ ಹೊರಗಡೆ ಅಡ್ಡಾಡುವುದನ್ನು ನಿಷೇಧಿಸಿ ಆದೇಶವನ್ನು ಹೊರಡಿಸಿದ್ದು, ಸದರ ಆದೇಶವನ್ನು ಸಕ್ರಿಯವಾಗಿ ಜಾರಿಗೊಳಿಸುವ ದೃಷ್ಠಿಯಿಂದ ದಿನಾಂಕ: 20.05.2021 ರಂದು ಸಾಯಂಕಾಲ 19-30 ಗಂಟೆಯ ಸುಮಾರಿಗೆ ಪಿರ್ಯಾದುದಾರರು ಹಾಗೂ ಸಿಬ್ಬಂದಿ ಜನರು ಕೂಡಿಕೊಂಡು ಸರಕಾರಿ ಜೀಪ್‌ದಲ್ಲಿ ಹಕ್ಕಿಂ ಚೌಕ ಹತ್ತಿರ ಪೆಟ್ರೋಲಿಂಗ ಮಾಡುತ್ತಿದ್ದಾಗ ಅಲ್ಲಿ ಒಬ್ಬ ವ್ಯಕ್ತಿ ತಿರುಗಾಡುತ್ತಿದ್ದು, ಅವನನ್ನು ತಮ್ಮ ಹತ್ತಿರ ಕರೆದು ಇಲ್ಲೇಕೆ ತಿರುಗಾಡುತ್ತಿದ್ದೀ ಅಂತಾ ಕೇಳಿದ್ದಕ್ಕೆ ಅವನು ಯಾವುದೇ ಸಮರ್ಪಕ ಕಾರಣ ನೀಡದೇ ಹಾಗೆ ಸುಮ್ಮನೆ ತಿರುಗಾಡುತ್ತಿದ್ದೆನೆ ಅಂತಾ ಹೇಳಿದ್ದು, ಸದರಿಯವರ ಹೆಸರು ಮತ್ತು ವಿಳಾಸವನ್ನು ವಿಚಾರಿಸಲಾಗಿ ಜಾವೀದ ತಂ: ಅಲ್ಲಾಭಕ್ಷ ಉಸ್ತಾದ, ವಯಾ-26 ವರ್ಷ, ಉದ್ಯೋಗ-ಕೂಲಿಕೆಲಸ, ಸಾ: ಗಚ್ಚಿನಮಹಲ, ಜೆ.ಎಂ.ರಸ್ತೆ ವಿಜಯಪುರ ಅಂತಾ ಹೇಳಿದ್ದು, ಕಾರಣ ಸದರ ಆರೋಪಿತನು ಅನಾವಶ್ಯಕವಾಗಿ ಹೊರಗಡೆ ಬಂದು ತಿರುಗಾಡಿ ಕರೋನಾ ವೈರಸ್/ಕೋವಿಡ್-19 ವೈರಸ್ ಹರಡದಂತೆ ಮಾನ್ಯ ಕರ್ನಾಟಕ ಸರಕಾರವು ಹೊರಡಿಸಿದ ಆದೇಶವನ್ನು ಉಲ್ಲಂಘನೆ ಮಾಡಿದ್ದಲ್ಲದೇ, ಸದರಿ ಕೊರೋನಾ ವೈರಸ್ ಎಂಬ ಮಾರಕ ಕಾಯಿಲೆ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ ಅಂತಾ ತಿಳಿದು-ತಿಳಿದು ನಿರ್ಲಕ್ಷತನ ಪ್ರದರ್ಶಿಸಿದ್ದು ಇರುತ್ತದೆ. ಈ ಬಗ್ಗೆ ರಾಜೇಶ್ ಎಸ್. ಲಮಾಣಿ, ಪಿ.ಎಸ್.ಐ (ಕಾ&ಸು) ಗೋಲಗುಮ್ಮಜ್ ಪೊಲೀಸ್ ಠಾಣೆ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ, ದಿನಾಂಕ: 20.05.2021 ರಂದು ಗೋಲಗುಮ್ಮಜ ಪೊಲೀಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.